
1

# ಅಧಿಕಾರ

ನಾವು ಮುಂದುವರಿಯುವ ಮೊದಲು, ಹುದುವಾದ ಅಧಿಕಾರದ ಮೇಲೆ ಒಪ್ಪಿ ಕೊಳ್ಳತಕ್ಕದ್ದು. ಅಕ್ಷರ ಕೂಡಿಸಿ ಶಬ್ದ ಹೇಳುವಲ್ಲಿ ಉತ್ತಮ ಮಟ್ಟದ ಇಂಗ್ಲೀಷ್ ಡಿಕ್ಶನರಿಯ ಬಗ್ಗೆ ನಾವು ಮೊದಲು ಒಪ್ಪಿಕೊಳ್ಳದಿದ್ದರೆ "c-a-t" ಅಕ್ಷರಗಳು "cat" ಎಂಬ ಅಕ್ಷರದಲ್ಲಿ ಇವೆಯೆಂದು ನಾವು ಒಪ್ಪಿಕೊಳ್ಳಲಾರೆವು. ಧರ್ಮದಲ್ಲಿ ನಾವು ಒಪ್ಪಿ ಕೊಳ್ಳ ಬೇಕಾದರೆ ನಮ್ಮ ಅಧಿಕೃತತೆಯು ಯಾವುದಾಗಿರುವುದು ಎಂಬುದರ ಮೇಲೆ ನಾವು ಮೊದಲು ಒಪ್ಪಿಕೊಳ್ಳತಕ್ಕದ್ದು.

## ದೇವರ ವಾಕ್ಯವು
## ನಮ್ಮ ಅಧಿಕಾರವಾಗಿದೆ

ಧರ್ಮದಲ್ಲಿ ನಮಗೆ ಯಾವುದು ಅಧಿಕೃತವಾದದ್ದಾಗಿರಬೇಕು? ಮುಸ್ಲಿಮ್ ಕುರಾನವನ್ನು ಒಳಗೊಂಡು ಟೆಲಿವಿಜನ್ ಸುವಾರ್ತಿಕ ಪ್ರಸಂಗದೊಂದಿಗೆ ಅನೇಕ ಅನೇಕ ಧಾರ್ಮಿಕ ಅಧಿಕಾರಗಳನ್ನು ಲೋಕವು ಸ್ವೀಕರಿಸಿಕೊಳ್ಳುತ್ತದೆ. ಹೀಗಿದ್ದರೂ, ದೇವರು ಒಂದೇ ಒಂದು ಅಧಿಕಾರವನ್ನು: ತನ್ನ ವಾಕ್ಯವನ್ನು, ಬೈಬಲನ್ನು ಒಪ್ಪಿ ಕೊಳ್ಳುತ್ತಾರೆ.




"ಆದಕಾರಣ ಕೇಳುವುದರ ಮೂಲಕ ವಿಶ್ವಾಸ ಬರುತ್ತದೆ, ಕ್ರಿಸ್ತನ ವಾಕ್ಯವನ್ನು ಕೇಳವುದರ ಮೂಲಕ" (ರೋಮಾಪುರ 10:17) ಎಂದು ಅಪೊಸ್ತಲ ಪೌಲನು ಹೇಳಿ ದನು. ಇನ್ನೂ ಮುಂದೆ ಹೋಗಿ, "ದೈವ ಪ್ರೇರಿತವಾದ ಪ್ರತಿಯೊಂದು ಶಾಸ್ತ್ರವು ಉಪ ದೇಶಕ್ಕೂ ಖಂಡನೆಗೂ ದಿದ್ದುಪಾಟಿಗೂ ನೀತಿಶಿಕ್ಷೆಗೂ ಉಪಯುಕ್ತವಾಗಿದೆ. ಆದದ ರಿಂದ ದೇವರ ಮನುಷ್ಯನು ಪ್ರವೀಣನಾಗಿ ಸಕಲ ಸತ್ಕಾರ್ಯಕ್ಕೆ ಸನ್ನದ್ಧನಾಗುವನು" (2 ತಿಮೊಥೆ 3:16, 17) ಎಂದು ಬರೆದಿದ್ದಾನೆ.

"ಶಾಸ್ತ್ರ" ಎಂಬುದು "ಬರೆಯಲ್ಪಟ್ಟದಕ್ಕೆ" ಸಂಬಂಧಿಸಿದೆ.[1] 2 ತಿಮೊಥೆ 3ರಲ್ಲಿ "ಶಾಸ್ತ್ರವು" ಲಿಖಿತ ದೇವರ ವಾಕ್ಯಕ್ಕೆಸಂಬಂಧಿಸಿದೆ. "ಶಾಸ್ತ್ರವು" ಹಳೇ ಒಡಂಬಡಿಕೆಯ (2 ತಿಮೊಥೆ 3:15) ಮತ್ತು ಹೊಸ ಒಡಂಬಡಿಕೆಯ ಬರಹಗಳನ್ನು (2 ಪೇತ್ರ 3:15, 16) ಒಳಗೊಂಡಿರುತ್ತದೆ. ಪರಿಶುದ್ಧ ಬರಹಗಳನ್ನು ಸೂಚಿಸಿ ಹೇಳಲು ಇನ್ನೊಂದು ಪದ "ವಾಕ್ಯ" ಎಂಬುದು (ಮತ್ತಾಯ 13:23; ಅಪೊಸ್ತಲರ ಕೃತ್ಯ 6:4). ಇಂದು ಉಪಯೋಗಿಸುವ ಪದ "ಬೈಬಲ್" ಎಂಬುದು. "ಬೈಬಲ್" ಎಂಬ ಮೂಲ ಗ್ರೀಕ ಪದಕ್ಕೆ "ಗ್ರಂಥ" ಎಂದರ್ಥ ಕೊಡುತ್ತದೆ. ಬೈಬಲು "ಪುಸ್ತಕಗಳ ಪುಸ್ತಕ"ವಾಗಿದೆ. ಅನೇಕ ಬೈಬಲು ಪ್ರತಿಗಳ ಮೇಲೆ

"ಪರಶುದ್ಧ ಗ್ರಂಥ" ಎಂದು ಮುಖ ಪುಟದ ಮೇಲೆ ಅಚ್ಚಾಗಿರುತ್ತದೆ. "ಪರಿಶುದ್ಧ" ಎಂಬ ಪದದ ಅರ್ಥ "ಪ್ರತ್ಯೇಕವಾದ" ಎಂದಾಗಿರುವುದು.[2] ಬೈಬಲು "ಪರಿಶುದ್ಧ ಗ್ರಂಥ"ವಾಗಿರುವುದು. ಯಾಕಂದರೆ ಅದು ದೇವರಿಂದ ಪ್ರೇರೇಪಿಸಲ್ಪಟ್ಟಿರುವುದು.

"ಪ್ರೇರೇಪಿಸಲ್ಪಟ್ಟಿದೆ" ಎಂಬ ಪದದ ಅಕ್ಷರಶಃ ಅರ್ಥ "ಉಸಿರಲ್ಪಟ್ಟಿದೆ"[3] ಎಂಬುದು. "ದೇವರಿಂದ ಪ್ರೇರೇಪಿಸಲ್ಪಟ್ಟಿದೆ" ಎಂಬ ಮಾತಿನ ಅರ್ಥ ಬೈಬಲು (ಸತ್ಯವೇದವು) "ದೇವರಿಂದ ಉಸಿರಲ್ಪಟ್ಟಿದ್ದು" ಎಂದಾಗುವುದು. ಮನುಷ್ಯನ ಮೂಗಿನಲ್ಲಿ ದೇವರು ಊಸುರಿದಾಗ ಮನುಷ್ಯನು ಜೀವಿಸುವ ಪ್ರಾಣಿಯಾದನು (ಆದಿಕಾಂಡ 2:7). ಹಾಗೆಯೇ ದೇವರು ಸತ್ಯವೇದದಲ್ಲಿ (ಬೈಬಲು) "ಊಸುರಿದನು" ಹಾಗೂ ಅದು ಸಜೀವ ಪುಸ್ತಕವಾಯಿತು (ನೋಡಿರಿ. ಇಬ್ರಿಯ 4:12). ಬೈಬಲ್‌ನಲ್ಲಿ ಬರೆಯುವದರ ಮೇಲೆ ದೇವರಿಗೆ ನಿಯಂತ್ರಣವಿದೆಯೆಂದು ಅಲಂಕಾರಿಕವಾಗಿ ಹೇಳುವುದಾಗಿದೆ. ಬೈಬಲ್‌ನಲ್ಲಿ ಏನು ಒಳಗೊಂಡಿರಬೇಕು - ಹೆಚ್ಚೂ ಅಲ್ಲ ಮತ್ತು ಕಡಿಮೆಯೂ ಅಲ್ಲ-ತಾನು ಬಯಸಿದ್ದೇ ಇರುವಂತೆ ದೃಢ ಮಾಡಿಕೊಂಡನು.

2 ತಿಮೊಥೆ 3:16, 17 ಓದಿರಿ. ಈ ವಚನಗಳು ದೇವರನ್ನು ಮೆಚ್ಚಿಸುವದಕ್ಕೆ ನಮಗೆ ಅಗತ್ಯವಿರುವ ಪ್ರತಿಯೊಂದನ್ನೂ ಬೈಬಲ್ ಒಳಗೊಂಡಿದೆ ಎಂದು ಸ್ಪಷ್ಟಪಡಿಸುತ್ತದೆ: ಅದು "ಉಪದೇಶಕ್ಕೆ ಉಪಯುಕ್ತವಾಗಿದೆ"; ನಾವು ಹೇಗೆ ಜೀವಿಸತಕ್ಕದ್ದೆಂದು ಅದು ನಮಗೆ ಹೇಳುತ್ತದೆ. ಅದು "ಖಂಡನೆಗೆ" ಉಪಯುಕ್ತವಾಗಿದೆ; ನಾವು ತಪ್ಪಾಗಿರುವಾಗ ಅದು ನಮಗೆ ತಿಳಿಸುತ್ತದೆ. ಅದು "ತಿದ್ದುಪಾಟಿಗೆ" ಉಪಯುಕ್ತವಾಗಿದೆ; ನಮ್ಮ ಜೀವಿತಗಳನ್ನು ಬದಲಾಯಿಸಿ ಕೊಳ್ಳಬೇಕೆಂದು ಒತ್ತಾಯ ಮಾಡುತ್ತದೆ. "ನೀತಿ ಶಿಕ್ಷೆಗೆ" ಉಪಯುಕ್ತವಾಗಿದೆ; ಆತ್ಮಿಕವಾಗಿ ಬೆಳೆಯಲು ಅದು ನಮಗೆ ಸಹಾಯ ಮಾಡುತ್ತದೆ. ಕೆಲವು ಒಳ್ಳೇ ಕಾರ್ಯಗಳಿಗಾಗಿ ಅಲ್ಲ ಆದರೆ "ಪ್ರತಿಯೊಂದು ಒಳ್ಳೇ ಕಾರ್ಯಕ್ಕಾಗಿ" ಅದು ನಮ್ಮನ್ನು ಸನ್ನದ್ಧರನ್ನಾಗಿ ಮಾಡುತ್ತದೆಂಬುದನ್ನು ಗಮನಿಸಿರಿ.

ಅನೇಕ ಒಳ್ಳೆಯ ಪುಸ್ತಕಗಳು ಬರೆಯಲ್ಪಟ್ಟಿವೆ. ಅನೇಕ ದೊಡ್ಡ ಪ್ರಸಂಗಗಳು ಪ್ರಸಂಗಿಸಲ್ಪಟ್ಟಿವೆ. ಬಹಳ ಉಪಯುಕ್ತವಾದ ಬುದ್ಧಿವಾದ ಕೊಡಲ್ಪಟ್ಟಿದೆ - ಆದರೆ ನಮ್ಮ ಕೇವಲ ಧಾರ್ಮಿಕ ಅಧಿಕಾರವು ಬೈಬಲಾಗಿರುವುದು. ನಮ್ಮ ಅಧ್ಯಯನವನ್ನು ಮುಂದುವರಿಸುವ ಮೊದಲು, ಇದರ ಮೇಲೆ ನಾವು ಒಪ್ಪಿಕೊಳ್ಳತಕ್ಕದ್ದು:

- ನಮ್ಮ ತಂದೆ ತಾಯಿಗಳು ನಮಗೆ ಅಧಿಕೃತರಲ್ಲ.
- ಯಾವುದೇ ಮಾನವ ಪ್ರಸಂಗಿ ಅಧಿಕೃತನಲ್ಲ.
- ಯಾವುದೇ ದೊಡ್ಡ ಧಾರ್ಮಿಕ ನಾಯಕರು ಅಧಿಕೃತನಲ್ಲ.
- ಡೇವಿಡ್ ರೋಪರ್ ಅಧಿಕೃತನಲ್ಲ.
- ________________________________ ಅಧಿಕೃತನಲ್ಲ.
  (ನಿಮ್ಮ ಹೆಸರನ್ನು ಬರೆಯಿರಿ.)
- ಬೈಬಲು ಬಿಟ್ಟು ಯಾವುದೇ ಗ್ರಂಥವು ಅಧಿಕೃತವಲ್ಲ.
- ಬೈಬಲು ಮಾತ್ರವೇ ನಮಗೆ ಅಧಿಕೃತವಾದದ್ದಾಗಿದೆ.

ಬೈಬಲು ಮನುಷ್ಯರಿಗೆ ದೇವರ ವಿಶೇಷವಾದ ಪ್ರಕಟಣೆಯಾಗಿದೆ ಎಂಬುದರ ಬಗ್ಗೆ ನೂರಕ್ಕೆ ನೂರರಷ್ಟು ನಿಶ್ಚಿತತೆಯಿಲ್ಲದಿದ್ದರೆ ಈ ಪುಸ್ತಕದ ಅಂತ್ಯದಲ್ಲಿ ಇರುವ "ನಂಬಿಕೆಕ್ಕೆ ಸವಾಲು" ಎಂಬ ಅನುಬಂಧ ಪಾಠವನ್ನು ಓದಿರಿ. ಇದರ ಬಗ್ಗೆ ನಿಮಗೆ ಇನ್ನೂ ಪ್ರಶ್ನೆಯಿದ್ದರೆ ಈ ಪುಸ್ತಕವನ್ನು ನಿಮಗೆ ಕೊಟ್ಟ ಸ್ನೇಹಿತರೊಂದಿಗೆ ಮಾತನಾಡಿರಿ.

ಬೈಬಲ್ ಬಗ್ಗೆ ಕಲಿತು ಕೊಳ್ಳಲು ಇನ್ನೂ ಹೆಚ್ಚು ಸಮಯದ ಅಗತ್ಯತೆಯಿರುವ ಸಾಧ್ಯತೆಯಿದೆ. "ಕೇಳುವುದರ ಮೂಲಕ ವಿಶ್ವಾಸ ಬರುತ್ತದೆ, ಕ್ರಿಸ್ತನ ವಾಕ್ಯವನ್ನು ಕೇಳು ವುದರ ಮೂಲಕ" (ರೋಮಾಪುರ 10:17) ಎಂದು ಪೌಲನು ಹೇಳಿದ್ದಾನೆ. ಹಾಗಿದ್ದರೆ ಮುಂದೆ ಓದಿರಿ.

## ಹೊಸ ಒಡಂಬಡಿಕೆಯು
## ನಮ್ಮ ಮಾರ್ಗದರ್ಶಿ

"ಧರ್ಮದಲ್ಲಿ ಯಾವುದು ನಮಗೆ ಅಧಿಕೃತವಾದದ್ದು?" ಎಂಬ ಪ್ರಶ್ನೆಗೆ ಇಲ್ಲಿಯವರೆಗೆ ನಾವು "ಬೈಬಲ್" ಎಂದು ಉತ್ತರ ಕೊಟ್ಟಿದ್ದೇವೆ. ಹೀಗಿದ್ದರೂ ನಮ್ಮ ಉತ್ತರವನ್ನು ಇನ್ನೂ ಹೆಚ್ಚಾಗಿ ನಿರ್ಬಂಧಿಸೋಣ.


ಬೈಬಲ್‌ನಲ್ಲಿ ಎರಡು ಮುಖ್ಯ ಭಾಗಗಳಿವೆ: ಹಳೇ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆ. ನಿಮ್ಮ ಬೈಬಲನ್ನು ತೆಗೆದು ಕೊಂಡು ಹೊಸ ಒಡಂಬಡಿಕೆಯ ಪ್ರಾರಂಭವನ್ನು ನೋಡಿರಿ. ವಿಭಾಗಿಸುವ ಪುಟದಲ್ಲಿ "ನಮ್ಮ ಕರ್ತನೂ ರಕ್ಷಕನೂ ಆದ ಯೇಸು ಕ್ರಿಸ್ತನ ಹೊಸ ಒಡಂಬಡಿಕೆ" ಎಂದು ಕಿಂಗ್ ಜೇಮ್ಸ್ ಆವೃತ್ತಿಯಲ್ಲಿದೆ. ಬೈಬಲ್‌ನಲ್ಲಿ ಹೊಸ ಒಡಂಬಡಿಕೆಯು ನಾಲ್ಕರಲ್ಲಿ ಮೂರು ಭಾಗದನಂತರ ಪ್ರಾರಂಭಿಸುವದನ್ನು ಗಮನಿಸಿರಿ. ಹಳೇ ಒಡಂಬಡಿಕೆಯು ಹೊಸ ಒಡಂಬಡಿಕೆಗಿಂತ ಮೂರು ಪಟ್ಟು ದೊಡ್ಡದಾಗಿದೆ. ಇದಕ್ಕೆ ಹಲವಾರು ಕಾರಣಗಳಿವೆ.[4] ಹಳೇ ಒಡಂಬಡಿಕೆಯು "ನೀನು ಮಾಡಬೇಕು," "ನೀನು ಮಾಡಬಾರದು" ಎಂಬ ಆಜ್ಞೆ ಗಳಿಂದ ತುಂಬಿಕೊಂಡಿರುವುದು. ಆದರೆ ಹೊಸ ಒಡಂಬಡಿಕೆಯ ಸೂತ್ರಗಳ ಮೇಲೆ ಹೆಚ್ಚು ಕೇಂದ್ರೀಕರಿಸುವುದು ಒಂದು ಕಾರಣವಾಗಿದೆ.[5]

ಪರಿಶುದ್ಧ ಬರಹಗಳ ಎರಡೂ ಭಾಗಗಳನ್ನು ನೀವು ಅಧ್ಯಯನ ಮಾಡುವಂತೆ, ಅವು ಯವಾಗಲೂ ಒಂದೇ ರೀತಿಯ ಆದೇಶಗಳನ್ನು ಕೊಡುವದಿಲ್ಲ ಎಂಬುದನ್ನು ಕಂಡುಕೊಳ್ಳುತ್ತೇವೆ.

- ಹಳೇ ಒಡಂಬಡಿಕೆಯಲ್ಲಿ ಆರಾಧಕರು ದೇವಾಲಯ ಎಂದು ಕರೆಯಲ್ಪಟ್ಟ ಕಟ್ಟಡಕ್ಕೆ ಹೋದರು (ಕೀರ್ತನೆ 5:7; ಹಬಕ್ಕೂಕ 2:20); ಹೊಸ ಒಡಂಬಡಿಕೆಯಲ್ಲಿ ಆತ್ಮದಲ್ಲಿಯೂ ಸತ್ಯದಲ್ಲಿಯೂ ನಾವು ಆರಾಧಿಸುವವರೆಗೆ ಸ್ಥಳಕ್ಕೆ ಮುಖ್ಯತ್ವವಿಲ್ಲ (ಯೋಹಾನ 4:21, 23, 24).
- ಹಳೇ ಒಡಂಬಡಿಕೆಯಲ್ಲಿ ಕರ್ತನಿಗೆ ಪ್ರಾಣಿ ಬಲಿಗಳು ಅರ್ಪಿಸಲ್ಪ ಡುತ್ತಿದ್ದವು (ಯಾಜಕಕಾಂಡ 1-5); ಹೊಸ ಒಡಂಬಡಿಕೆಯಲ್ಲಿ ಯೇಸುವು ನಮ್ಮ ಪರಿಪೂರ್ಣ ಯಜ್ಞವಾಗಿದ್ದಾನೆ (ಎಫೆಸ 5:2; ಇಬ್ರಿಯ 10:12), ನಮ್ಮ ಜೀವಿತಗಳ ಯಜ್ಞವನ್ನು ನಾವು ಸಮರ್ಪಿಸಬೇಕು (ರೋಮಾಪುರ 12:1; ಇಬ್ರಿಯ 13:15).
- ಹಳೇ ಒಡಂಬಡಿಕೆಯಲ್ಲಿ, ವಿಶೇಷ ಪುರುಷರ ಗುಂಪು "ಯಾಜಕರು" ಎಂದು ಕರೆಯಲ್ಪಟ್ಟರು (ಯಾಜಕಕಾಂಡ 28:41; 40:15); ಹೊಸ ಒಡಂಬಡಿಕೆಯಲ್ಲಿ ಎಲ್ಲಾ ಕ್ರೈಸ್ತರು ಯಾಜಕರು ಎಂದು ಕರೆಯಲ್ಪಡುತ್ತಾರೆ (1 ಪೇತ್ರ 2:5, 9).

- ಹಳೇ ಒಡಂಬಡಿಕೆಯಲ್ಲಿ ಏಳನೆಯ ದಿನವು ದೇವರಿಗೆ ಮೀಸಲಾಗಿತ್ತು (ವಿಮೋಚನಕಾಂಡ 20:8-11); ಹೊಸ ಒಡಂಬಡಿಕೆಯಲ್ಲಿ ಆರಾಧನೆಯ ನಮ್ಮ ವಿಶೇಷ ದಿನವು ಮೊದಲನೆಯ ದಿನವು (ಅಪೊಸ್ತಲರ ಕೃತ್ಯ 20:7),[6] ಭಾನುವಾರ.
- ಹಂದಿ ಮಾಂಸದಂಥ ಕೆಲವು ಪದಾರ್ಥಗಳನ್ನು ತಿನ್ನುವುದನ್ನು ಹಳೇ ಒಡಂಬಡಿಕೆಯು ನಿಷೇಧಿಸಿತು (ಯಾಜಕಕಾಂಡ 11:7); ಹೊಸ ಒಡಂಬಡಿಕೆಯಲ್ಲಿ ಆ ನಿರ್ಬಂಧಗಳು ತೆಗೆದು ಹಾಕಲ್ಪಟ್ಟವು (ಅಪೊಸ್ತಲರ ಕೃತ್ಯ 10:9-16).

ಈ ಭೇದಗಳು ಅನಿಶ್ಚಿತವಾಗಿ ಮುಂದುವರಿಯುವಂಥವುಗಳಾಗಿವೆ. ಎರಡೂ ಒಡಂಬಡಿಕೆಗಳಲ್ಲಿಯ ಆದೇಶಗಳನ್ನು ಸಂಪೂರ್ಣವಾಗಿ ಕೈಕೊಳ್ಳಲು ಯಾವುದೇ ಮಾರ್ಗವಿರುವದಿಲ್ಲ. ಹಾಗಾದರೆ ನಾವು ಯಾವುದನ್ನು ಕೈಕೊಳ್ಳಬೇಕು? ಕೆಳಗಿನ ರೇಖಾ ಚಿತ್ರವು ಆ ಪ್ರಶ್ನೆಗೆ ಉತ್ತರ ಕೊಡಲು ಸಹಾಯ ಮಾಡುವುದು:



ಮೊದಲು ಮೇಲಿನ ಆಕೃತಿಯಲ್ಲಿಯ ಕೆಳಗಿನ ಭಾಗದಲ್ಲಿಯ ಶಬ್ದಗಳನ್ನು ನೋಡಿರಿ: "ನಿಬಂಧನೆ - ಒಡಂಬಡಿಕೆ - ಒಪ್ಪಂದ." ಕೆಜೆವಿಯು ಕೆಲವು ಸಲ "ನಿಬಂಧನೆ" ಎಂಬ ಪದವನ್ನು "ಹಳೇ ಒಡಂಬಡಿಕೆ"ಯಲ್ಲಿಯು (2 ಕೊರಿಂಥ 3:14) ಮತ್ತು "ಹೊಸ ಒಡಂಬಡಿಕೆ"ಯಲ್ಲಿಯಂತೆ (ಮತ್ತಾಯ 26:28; 1 ಕೊರಿಂಥ 11:25; 2 ಕೊರಿಂಥ 3:6; ಇಬ್ರಿಯ 9:15) ಉಪಯೋಗಿಸುತ್ತದೆ. ಹೆಚ್ಚು ಸಾಮಾನ್ಯವಾಗಿಯು ಆ ವಚನಗಳಲ್ಲಿ ಕಂಡು ಬರುವ ಗ್ರೀಕ ಪದವನ್ನು "ಒಡಂಬಡಿಕೆ" ಎಂದು ಭಾಷಾಂತರಿಸಿದೆ (ಓದಿರಿ ಇಬ್ರಿಯ 8:6, 7, 13; 9:1; 12:24), ಯನ್‌ಎಎಸ್‌ಬಿ ಯಲ್ಲಿ ಈ ಎಲ್ಲಾ ವಚನಗಳಲ್ಲಿ "ಒಡಂಬಡಿಕೆ" ಎಂಬ ಪದವಿದೆ. ನಾವು ಹಳೇ ನಿಬಂಧನೆಯ ಬಗ್ಗೆ ಮಾತಾಡುವಾಗ ನಾವು ಹಳೇ ಒಡಂಬಡಿಕೆಯ ಬಗ್ಗೆ ಮಾತಾಡುತ್ತೇವೆ. ಹೊಸ ನಿಬಂಧನೆಯ ಬಗ್ಗೆ ಮಾತಾಡುವಾಗ ಹೊಸ ಒಡಂಬಡಿಕೆಯ ಬಗ್ಗೆ ಮಾತಾಡುತ್ತೇವೆ.

ಒಡಂಬಡಿಕೆಯು ಏನಾಗಿದೆ? ಒಡಂಬಡಿಕೆಯು ಎರಡು ಫಕ್ಷಗಳ ಮಧ್ಯದಲ್ಲಿಯ ಒಪ್ಪಂದವಾಗಿದೆ. ಹಳೇ ಒಡಂಬಡಿಕೆಯು ದೇವರ ಹಾಗೂ ಯೆಹೂದಿ ಜನಾಂಗದ ಮಧ್ಯದಲ್ಲಿಯ ಒಪ್ಪಂದವಾಗಿತ್ತು (ಧರ್ಮೋಪದೇಶ ಕಾಂಡ 5:1-4). ಯೆಹೂದ್ಯರನ್ನು[7] (ಹಾಗೂ ಯೆಹೂದಿ ಧರ್ಮವನ್ನು ಅಪ್ಪಿಕೊಂಡ ಮತಾವಲಂಭಿಗಳನ್ನು) ಬಿಟ್ಟು ಅದು ಯಾರ ಮೇಲೆಯೋ ಬಂಧಿಸಲ್ಪಟ್ಟಿರಲಿಲ್ಲ. ಹೊಸ ಒಡಂಬಡಿಕೆಯು ದೇವರಿಗೂ

ಕ್ರೈಸ್ತರಿಗೂ ಮಧ್ಯದಲ್ಲಿಯ ಒಪ್ಪಂದವಾಗಿದೆ (ಇಬ್ರಿಯ 10:16).

ಈಗ ಆಕೃತಿಯಲ್ಲಿಯ ಮೇಲಿನ ಭಾಗವನ್ನು ನೋಡಿರಿ. ಶಿಲುಬೆಯು ಯೇಸುವಿನ ಶಿಲುಬೆಯಾಗಿರುವುದು. ಶಿಲುಬೆಯ ಎಡಗಡೆಗೆ ಇರುವ ಕ್ಷೇತ್ರವು ಹಳೇ ಒಡಂಬಡಿಕೆಯ ಸಮಯವನ್ನು ಪ್ರತಿನಿಧೀಕರಿಸುವುದು. ಬಲಗಡೆಯದು ಹೊಸ ಒಡಂಬಡಿಕೆಯ ಯುಗವನ್ನು ಪ್ರತಿನಿಧೀಕರಿಸುವುದು. ಎಡಗಡೆಯಲ್ಲಿಯ ಭಾಗವು ಶಿಲುಬೆಯ ಕಡೆಗೆ ತೋರಿಸುವುದು. ಬಲಗಡೆಯ ಬಾಗವು ಹಿಂದಿರುಗಿ ಶಿಲುಬೆಯ ಕಡೆಗೆ ತೋರಿಸ ಬಹುದು.

ಮೊದಲು ಹಳೇ ಒಡಂಬಡಿಕೆಯು ಯೇಸುವಿನ ಕಡೆಗೆ ನೋಡುತ್ತದೆಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಹಳೇ ಒಡಂಬಡಿಕೆಯು ನಿರಂತರವಾಗಿರಬೇಕೆಂದು ದೇವರು ಎಂದೂ ಯೋಚಿಸಿದ್ದಿಲ್ಲ. ಯೆರೆಮೀಯನು ಹೀಗೆ ಬರೆದ್ದಿದಾನೆ,

> ಯೆಹೋವನು ಇಂತೆನ್ನುತ್ತಾನೆ - ಇಗೋ, ನಾನು ಇಸ್ರಾಯೇಲ್ ವಂಶದವರೊಂದಿಗೂ ಯೆಹೂದ ವಂಶದವರೊಂದಿಗೂ ಹೊಸ ದಾಗಿರುವ ಒಂದು ಒಡಂಬಡಿಕೆಯನ್ನು ಮಾಡಿಕೊಳ್ಳುವ ದಿನಗಳು ಬರುವವು; ಈ ಒಡಂಬಡಿಕೆಯು ನಾನು ಇವರ ಪಿತೃಗಳನ್ನು ಕೈಹಿಡಿದು ಐಗುಪ್ತ ದೇಶದೊಳಗಿಂದ ಕರತಂದಾಗ ಅವರ ಸಂಗಡ ಮಾಡಿಕೊಂಡ ಒಡಂಬಡಿಕೆಯಂಥದಲ್ಲ (ಯೆರೆಮೀಯ 31:31, 32ಎ).[8]

ಹಳೇ ಒಡಂಬಡಿಕೆಯು ಎಷ್ಟರವರೆಗೆ ಉಳಿಯುವುದು? ಗಲಾತ್ಯ 3ರಲ್ಲಿ ಪೌಲನು "ವಾಗ್ದಾನದಲ್ಲಿ ಸೂಚಿತನಾದವನು ಹುಟ್ಟಿಬರುವತನಕ" (ವ. 19) ಅಬ್ರಹಾಮನಿಗೆ ಮಾಡಿದ ವಾಗ್ದಾನಕ್ಕೆ ಹಳೇ ನಿಯಮವು "ಕೊಡಿಸಲ್ಪಟ್ಟಿತು" ಎಂದು ಹೇಳಿದ್ದಾನೆ. ಅದೇ ಅಧ್ಯಾಯದ 16ನೆಯ ವಚನವು "ಸಂತತಿಯು" ಯಾವುದೆಂದು ಹೇಳುತ್ತದೆ: "ದೇವರು ಅಬ್ರಹಾಮನಿಗೂ ಅವನ ಸಂತತಿಗೂ ವಾಗ್ದಾನಗಳನ್ನು ಮಾಡಿದನು. ಆತನು 'ನಿನ್ನ ಸಂತತಿಗಳಿಗೆ' ಎಂದು ಹೇಳಿ ಅನೇಕರನ್ನು ಸೂಚಿಸದೆ 'ನಿನ್ನ ಸಂತತಿಗೆ' ಎಂದು ಹೇಳಿ ಒಬ್ಬನನ್ನೇ ಸೂಚಿಸುತ್ತಾನೆ; ನಿನ್ನ ಸಂತತಿ ಕ್ರಿಸ್ತನೇ." "ಆದ್ದರಿಂದ ಧರ್ಮಶಾಸ್ತ್ರವು ನಮ್ಮನ್ನು ಕ್ರಿಸ್ತನ ಬಳಿಗೆ ತರುವಂತೆ ನಮಗೆ ಬಾಲ ಶಿಕ್ಷಕನಂತಿತ್ತು" ಎಂದು ಪೌಲನು ವಚನ 24ರಲ್ಲಿ ಹೇಳಿದ್ದಾನೆ. ಹಳೇ ಒಡಂಬಡಿಕೆಯು ಮಾನವರನ್ನು ಕ್ರಿಸ್ತನ ಬಳಿಗೆ ತರುವದಾಗಿತ್ತು - ಹಾಗೂ ಕ್ರಿಸ್ತನು ಬರುವವರೆಗೆ ಉಳಿಯ ಬೇಕಾಗಿತ್ತು. ಆದುದರಿಂದ, ಆಕೃತಿಯಲ್ಲಿ ಎಡಗಡೆಯ ಬಾಣವು ಮುಂದಕ್ಕೆ ತೋರಿಸುತ್ತದೆ.

ಯಾಕೆ ಬಾಣವು ಕ್ರಿಸ್ತನ ಕಡೆಗೆ ತೋರಿಸುತ್ತದೆ? ಯೇಸು ತನ್ನ ಮರಣದಿಂದ "ನಮ್ಮಗೆ ವಿರೋಧವಾಗಿಯೂ ಪ್ರತಿಕೂಲವಾಗಿಯೂ ಆಜ್ಞಾರೂಪವಾಗಿದ್ದಂಥ ಋಣ ಪತ್ರವನ್ನು ರದ್ದು ಮಾಡಿ; ಅದನ್ನು ಶಿಲುಬೆಗೆ ಜಡಿದು ಇಲ್ಲದಂತಾಗ ಮಾಡಿದನು" (ಕೊಲೊಸ್ಸೆ 2:14) ಎಂದು ಕೊಲೊಸ್ಸೆಯ ಕ್ರೈಸ್ತರಿಗೆ ಪೌಲನು ತನ್ನ ಪತ್ರಿಕೆಯಲ್ಲಿ ಹೇಳಿದನು. ಯೇಸುವು ಕೆಲವೊಂದು ಶಾಸನಗಳನ್ನು ಶಿಲುಬೆಗೆ ಜಡಿದು ಅವು ಇನ್ನು ಮುಂದೆ ಜಾರಿಯಲ್ಲಿ ಇರುವದಿಲ್ಲ ಎಂದು ಪ್ರಕಟಿಸಿದನು ಎಂದು ರೂಪಕವಾಗಿ ಹೇಳ ಬಹುದು.[9] ಯಾವ ಆಜ್ಞಾ ಶಾಸನವಾಗಿದ್ದ ಪತ್ರಗಳ ಬಗ್ಗೆ ಪೌಲನು ಮಾತಾಡುತ್ತಿದ್ದನು? ಅದೇ ಹಿನ್ನೆಲೆಯಲ್ಲಿ ಕೆಲವುಗಳನ್ನು ಹೇಳಿದ್ದಾನೆ: ಆಜ್ಞಾ ಪತ್ರವನ್ನು ಇಲ್ಲದಂತಾಗ ಮಾಡಿದ್ದರಿಂದ ಅವರನ್ನು "ತಿಂದು ಕುಡಿಯವ ವಿಷಯದಲ್ಲಿಯೂ ಹಬ್ಬ ಅಮವಾಸ್ಯೆ ಸಬ್ಬಾತ್ ಎಂಬವುಗಳ ವಿಷಯದಲ್ಲಿ" (ರೋಮಾಪುರ 2:16) ಯಾರೂ ದೋಷಿಗಳೆಂದು ಎಣಿಸಬಾರದು (ಅಂದರೆ ಖಂಡಿಸಲ್ಪಡಬಾರದು). ಇಲ್ಲಿ ಸ್ಪಷ್ಟವಾದ ಅಂಶವು ಸಬ್ಬಾತು.

ಆಹಾರ, ಪಾನೀಯ ಮತ್ತು ಹಬ್ಬಗಳನ್ನು ಕುರಿತು ಅನೇಕ ನಿಯಮಗಳು ಹೇಳಲ್ಪಟ್ಟಿವೆ. ಆದರೆ ಸಬ್ಬಾತನ್ನು ಕುರಿತ ಆದೇಶಗಳು ಒಂದು ನಿಯಮಾವಳಿಯಲ್ಲಿರುವುದು. ಹಳೇ ಒಡಂಬಡಿಕೆಯ ದಶಾಜ್ಞೆಗಳ ಸುತ್ತ ತಿರುಗುತ್ತಿತ್ತು. ಆಜ್ಞೆಗಳಲ್ಲಿ ನಾಲ್ಕನೆಯದು, "ಸಬ್ಬಾತ್ ದಿನವನ್ನು ದೇವರ ದಿನವೆಂದು ಆಚರಣೆಗೆ ತರುವದಕ್ಕೆ ಜ್ಞಾಪಕದಲ್ಲಿಟ್ಟುಕೊಳ್ಳಬೇಕು" (ವಿಮೋಚನಕಾಂಡ 20:8) ಎಂದು ಹೇಳುತ್ತದೆ. ಹೀಗೆ (ಪೌಲನ ಪದಗಳ ಅರ್ಥದಲ್ಲಿ) ಹಳೇ ಒಡಂಬಡಿಕೆಯು ಶಿಲುಬೆಗೆ ಜಡಿಯಲ್ಪಟ್ಟಿತು.

ನಮ್ಮ ದೃಷ್ಟಾಂತದಲ್ಲಿಯ ಶಿಲುಬೆಯ ಬಲಗಡೆಗೆ ಈಗ ನೋಡೋಣ. ಕ್ರಿಸ್ತನ ಮರಣವು ಹಳೇ ಒಡಂಬಡಿಕೆಯ ಅಂತ್ಯವನ್ನು ಸೂಚಿಸಿತಲ್ಲದೇ ಹೊಸ ಒಡಂಬಡಿಕೆಯ ಪ್ರಾರಂಭವನ್ನೂ ತಿಳಿಸಿತು. ಯೇಸುವನ್ನು "ಹೊಸ ಒಡಂಬಡಿಕೆಯ ಮಧ್ಯಸ್ಥನು"[10] ಎಂದು ಇಬ್ರಿಯ 9:15 ಹೇಳುತ್ತದೆ. ವಚನವು ಹೀಗೆ ವಿವರಿಸುತ್ತದೆ: "ಮರಣ ಶಾಸನವು ಇರುವಲಿ ಅದನ್ನು ಬರೆಯಸಿದವನ ಮರಣವು ಪ್ರಸಿದ್ಧವಾಗಿರ ಬೇಕಷ್ಟೇ. ಮರಣ ಶಾಸನವು ಮರಣವಾದ ಮೇಲೆ ನಡೆಯುವುದೇ ಹೊರತು ಬರೆಯಸಿದವನು ಜೀವದಿಂದಿರುವಾಗ ಎಂದಿಗೂ ಸಲ್ಲುವದಿಲ್ಲ" (9:16, 17). ಇಲ್ಲಿ ಹೇಳಲ್ಪಟ್ಟ ಒಡಂಬಡಿಕೆಯನ್ನು, "ಕೊನೆಯ ಮರಣ ಪತ್ರ ಮತ್ತು ಒಡಂಬಡಿಕೆ" ಎಂದು ನಾನು ಕರೆಯುವ ಒಂದು ವಿಶೇಷ ಒಪ್ಪಂದವಾಗಿದೆ. (ಪರಿಚ್ಛೇದವನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಲು "ಒಡಂಬಡಿಕೆ" ಎಂಬ ಪದವನ್ನು (ಕೆಜೆವಿ) ಇಲ್ಲಿ ಒಮ್ಮೆ ಉಪಯೋಗಿಸಿದೆ.) ಮನುಷ್ಯನ ಕೊನೆಯ ಮರಣ ಪತ್ರವು ಮತ್ತು ಒಡಂಬಡಿಕೆಯು ಯಾವಾಗ ಜಾರಿಗೆ ಬರುತ್ತದೆ? ಅವನು ಸಾಯುವಾಗ, ಹಾಗೆಯೇ ಯೇಸುವಿನ ಕೊನೆಯ ಮರಣ ಪತ್ರವು ಮತ್ತು ಒಡಂಬಡಿಕೆಯು ಆತನು ಶಿಲುಬೆಯ ಮೇಲೆ ಮರಣ ಹೊಂದಿದಾಗ ಜಾರಿಗೆ ಬಂತು.[11]

ಯೇಸುವಿನ ಜನನವು ಹೊಸ ಒಡಂಬಡಿಕೆಯ ಅವಧಿಯ ಪ್ರಾರಂಭ ಎಂದು ಸಾಮಾನ್ಯವಾದ ತಪ್ಪು ತಿಳುವಳಿಕೆಯಾಗಿದೆ. ಅದು ಸತ್ಯವಾದದ್ದಲ್ಲ. ಯೇಸು ತಾನೇ ಹಳೇ ಒಡಂಬಡಕೆಯ ಕೆಳಗೆ ಜೀವಿಸಿದನು. ಆತನು ಒಳ್ಳೆಯ ಯೆಹೂದ್ಯನಾಗಿದ್ದನು. ಹಾಗೂ ಹಳೇ ಒಡಂಬಡಿಕೆಯ ನಿಯಮಗಳನ್ನು ಯಾವಾಗಲೂ ಕೈಕೊಂಡನು. (ಅವುಗಳನ್ನು ಪರಿಪೂರ್ಣವಾಗಿ ಕೈಕೊಂಡವನು ಆತನೊಬ್ಬನೇ.) ಇದು ಕೆಲವರನ್ನು ಗಲಿಬಿಲಿ ಪಡಿಸುತ್ತದೆ. ಉದಾಹರಣೆಯಾಗಿ ಯೇಸು ಸಬ್ಬಾತ್ತನ್ನು ಕೈಕೊಂಡನು (ಮಾರ್ಕ 1:21; ಲೂಕ 4:16) ಹಾಗೂ ಅದರಿಂದ ನಾವು ಸಬ್ಬತ್ ದಿನದಂದು (ವಾರದ ಏಳನೆಯ ದಿನದಂದು) ಆರಾಧಿಸಬೇಕೆಂದು ಒತ್ತಾಯ ಮಾಡುತ್ತಾರೆ. ಆದಾಗ್ಯೂ ಭೂಲೋಕದಲ್ಲಿಯ ತನ್ನ ಜೀವನದ ಸಮಯದಲ್ಲಿ ಯೇಸು ಹಳೇ ಒಡಂಬಡಕೆಯ ಪ್ರಾಣಿ ಯಜ್ಞಗಳನೋಳಗೊಂಡು ಎಲ್ಲಾ ನಿಯಮಗಳನ್ನು ಕೈಕೊಳ್ಳಲು (ಮತ್ತಾಯ 5:23; 8:4) ಪ್ರೋತ್ಸಹಿಸಿದನು (ಮತ್ತಾಯ 19:17). ಹೊಸ ಒಡಂಬಡಿಕೆಯ ಪ್ರಾರಂಭವು ಕ್ರಿಸ್ತನ ಜನನದಿಂದಲ್ಲ ಆದರೆ ಆತನ ಮರಣದಿಂದ ಗುರುತಿಸಲ್ಪಟ್ಟಿದೆ.

ಆಕೃತಿಯ ಅಧ್ಯಯನ ಮಾಡಿರಿ. ಯೇಸುವಿನ ಮರಣಕ್ಕಿಂತ ಮೊದಲು ಜೀವಿಸಿದ ಯೆಹೂದ್ಯರು ಹಳೇ ಒಡಂಬಡಿಕೆಯ ವ್ಯವಸ್ಥಾಪನೆಯ ಕೆಳಗೆ ಜೀವಿಸಿದರು. ಶಿಲುಬೆಯ ಈ ಕಡೆಯಲ್ಲಿ ಜೀವಿಸುವ ನಾವು ಹೊಸ ಒಡಂಬಡಿಕೆಯ ವ್ಯವಸ್ಥಾಪನೆಯಲ್ಲಿ ಜೀವಿಸುತ್ತಿದ್ದೇವೆ. ಯೇಸುವಿನ ಮರಣವು ವಿಭಾಗಿಸುವ ಬಿಂದುವಾಗಿರುವುದು.

ಕೆಲವು ಆದಿ ಕ್ರೈಸ್ತರು, ವಿಶೇಷವಾಗಿ ಯೆಹೂದ್ಯರಾಗಿ ಬೆಳೆಯಿಸಲ್ಪಟ್ಟವರು ತಾವು ಇನ್ನು ಮುಂದೆ ಹಳೇ ಒಡಂಬಡಿಕೆಯ ನಿಯಮಗಳಿಗೆ ಬದ್ಧರಲ್ಲ ಎಂಬ

ಸಂಗತಿಯೊಂದಿಗೆ ಹೋರಾಡಿದರು. ಕೆಲವು ಜನ ಯೆಹೂದಿ ಕ್ರೈಸ್ತರು ಅನ್ಯ ಜನಾಂಗದವರಿಂದ ಬಂದ ಕ್ರೈಸ್ತರು[12] ಧರ್ಮಶಾಸ್ತ್ರವನ್ನು ಇಲ್ಲವೇ ಸುನ್ನತಿಯಂಥ ಅದರ ಭಾಗವನ್ನಾದರೂ ಕೈಕೊಳ್ಳಬೇಕೆಂದು ಹೇಳಿದರು.[13] ಗಲಾತ್ಯ ಮತ್ತು ಇಬ್ರಿಯರಿಗೆ ಬರೆದ ಪತ್ರಿಕೆ ಇವುಗಳನ್ನೊಳಗೊಂಡು ಹಲವಾರು ಹೊಸ ಒಡಂಬಡಿಕೆಯ ಪುಸ್ತಕಗಳು ಈ ಸಮಸ್ಯೆಯನ್ನು ಕುರಿತು ಹೇಳಿವೆ. ಈಗಾಗಲೇ ನಾನು ಗಲಾತ್ಯದವರಿಗೆ ಬರೆದ ಪತ್ರಿಕೆಯ ಕೆಲವು ವಚನಗಳ ಬಗ್ಗೆ ಹೇಳಿದ್ದೇನೆ; ಇನ್ನು ಕೆಲವನ್ನು ನೋಡೋಣ.

ಪುನಃ ಗಲಾತ್ಯ 3 ನೋಡಿರಿ: "ನಾವು ವಿಶ್ವಾಸದ ಮೂಲಕ ನೀತಿವಂತರೆಂದು ನಿರ್ಣಯಿಸಲ್ಪಡುವುದಕ್ಕಾಗಿ ಧರ್ಮಶಾಸ್ತ್ರವು ನಮ್ಮನ್ನು ಕ್ರಿಸ್ತನ ಬಳಿಗೆ ತರುವಂತೆ ನಮ್ಮ ಬಾಲಶಿಕ್ಷಕನಂತಿತ್ತು. ಆದರೆ ಈಗ ವಿಶ್ವಾಸವು ಬಂದಿರಲಾಗಿ ನಾವಿನ್ನು ಬಾಲಶಿಕ್ಷಕನಂತಿದ್ದ ಧರ್ಮಶಾಸ್ತ್ರದ ಕೆಳಗಿರುವುದಿಲ್ಲ" (24, 25 ವಚನಗಳು) ಎಂದು ಪೌಲನು ಹೇಳಿದ್ದಾನೆ. ಈ ಮೊದಲು ಗಮನಿಸಿದಂತೆ ಹಳೇ ನಿಯಮದ ಮುಖ್ಯ ಉದ್ದೇಶವು ಮನುಷ್ಯರನ್ನು ಕ್ರಿಸ್ತನ ಕಡೆಗೆ ನಡಿಸುವುದಾಗಿತ್ತು. ಒಮ್ಮೆ ಆ ಉದ್ದೇಶವು ಪೂರೈಸಲ್ಪಟ್ಟ ನಂತರ ಜನರು ಆ ಧರ್ಮಶಾಸ್ತ್ರದ "ಅಧೀನತೆಯಲ್ಲಿ ಬರುವದಿಲ್ಲ."

ಗಲಾತ್ಯ 5 ರಲ್ಲಿ ಪೌಲನು ಇದನ್ನು ಇನ್ನೂ ಬಲವಾಗಿ ಒತ್ತಿ ಹೇಳಿದ್ದಾನೆ. "ಸುನ್ನತಿ ಮಾಡಿಸಿಕೊಳ್ಳುವ ಪ್ರತಿಯೊಬ್ಬನಿಗೆ-ನೀನು ಧರ್ಮಶಾಸ್ತ್ರದಲ್ಲಿ ಹೇಳಿರುವದನ್ನೆಲ್ಲಾ ಮಾಡುವ ಹಂಗಿನಲ್ಲಿದ್ದೀ ಎಂದು ತಿಳಿಗಿ ಪ್ರಮಾಣವಾಗಿ ಹೇಳುತ್ತೇನೆ" ಎಂದು ವ. 3ರಲ್ಲಿ ಅವನು ಹೇಳಿದ್ದಾನೆ. "ಸುನ್ನತಿ" ಎಂಬುದು ಇಲ್ಲಿ ಧಾರ್ಮಿಕ ಆಚರಣೆಗೆ ಸಂಬಂಧಿಸಿತ್ತು ಆದರೆ ವೈದ್ಯಕೀಯಕ್ಕೆ ಸಂಬಂಧಿಸಿರಲಿಲ್ಲ. ಕೆಲವು ಯೆಹೂದಿ ಕ್ರೈಸ್ತರು ಅನ್ಯಜನಾಂಗಗಳಿಂದ ಬಂದ ಕ್ರೈಸ್ತರಿಗೆ (ಗಲಾತ್ಯದಲ್ಲಿದ್ದಂಥವರಿಗೆ) ಹಳೇ ಒಡಂಬಡಿಕೆಯಲ್ಲಿ ಬೋಧಿಸಿದಂತೆ ಸುನ್ನತಿ ಹೊಂದಬೇಕೆಂದು ಬೋಧಿಸುತ್ತಿದ್ದರು. ಗಲಾತ್ಯ 5:3ರಲ್ಲಿ ಪೌಲನ ವಿಷಯವು ನೀವು ಹಳೇ ಧರ್ಮಶಾಸ್ತ್ರದ ಭಾಗವನ್ನು ಕೈಕೊಳ್ಳಬೇಕಾಗಿದ್ದರೆ ನೀವು ಅದರ ಎಲ್ಲವನ್ನೂ ಕೈಕೊಳ್ಳುವ ಹಂಗಿನಲ್ಲಿರುವಿರಿ ಎಂಬುದಾಗಿದೆ.


ಹಳೇ ಒಡಂಬಡಿಕೆಯ ಎಲ್ಲಾ ಆಜ್ಞೆಗಳನ್ನು (ವರ್ಷದಲ್ಲಿ ಮೂರು ಸಲ ಯೆರೂಸಲೇಮಿಗೆ ಹೋಗುವುದು, ಆಹಾರದ ನಿಯಮಗಳನ್ನು ಪಾಲಿಸುವುದು; ಇತ್ಯಾದಿ) ಯಾರಾದರೂ ಕೈಕೊಳ್ಳುವರೋ ಎಂಬುದನ್ನು ನಾನು ತಿಳಿದಿರುವದಿಲ್ಲ. ಹೀಗಿದ್ದೂ ಸಬ್ಬತ್ತನ್ನು ಕೈಕೊಳ್ಳುವುದು, ಪ್ರತ್ಯೇಕ ಯಾಜಕತ್ವವಿರುವುದು ಇಲ್ಲವೇ ಆರಾಧನೆಯಲ್ಲಿ ವಾದ್ಯ ಸಂಗೀತ ಉಪಯೋಗಿಸುವಂಥದ್ದು, ಇತ್ಯಾದಿ ಕೆಲವು ಹಳೇ ಒಡಂಬಡಿಕೆಯ ಆಜ್ಞೆಗಳನ್ನು "ಆಯ್ದುಕೊಳ್ಳಲು" ಕೆಲವರು ಬಯಸುವರು. ಅದನ್ನು ನಾವು ಮಾಡಲಿಕ್ಕಾಗುವದಿಲ್ಲ ಎಂದು ಪೌಲನು ವಿವರಿಸಿದನು. ಹಳೇ ಒಡಂಬಡಿಕೆಯ ಭಾಗವನ್ನು ಧರ್ಮಶಾಸ್ತ್ರವೆಂದು ಇಟ್ಟುಕೊಂಡರೆ ನಾವು ಇಡೀ ಧರ್ಮಶಾಸ್ತ್ರವನ್ನು ಇಟ್ಟುಕೊಳ್ಳತಕ್ಕದ್ದು. ಅದರ ಭಾಗವನ್ನು ನಾನು ಬಂಧಿಸಿದರೆ, ಎಲ್ಲವನ್ನೂ ಬಂಧಿಸಬೇಕು.

ಹಳೇ ಒಡಂಬಡಿಕೆಯನ್ನು ಬದ್ಧಿಸಿದರ ಪರಿಣಾಮವು ಕೆಟ್ಟದ್ದಾಗಿದೆ. ಆದರೆ ಗಲಾತ್ಯ 5ರಲ್ಲಿ ಹೇಳಿದ ಮುಂದಿನ ಪರಿಣಾಮವು ಇನ್ನೂ ಕೆಟ್ಟದ್ದಾಗಿದೆ. "ನಿಮ್ಮಲ್ಲಿ ಯಾರಾರು ದರ್ಮಶಾಸ್ತ್ರದಿಂದ ನೀತಿವಂತರಾಗ ಬೇಕೆಂದಿರುತ್ತಾರೋ ಅವರು ಕ್ರಿಸ್ತನಿಂದ ಅಗಲಿ ಹೋದರು. ಕೃಪಾಶ್ರಯದೊಳಗಿಂದ ಬಿದ್ದುಹೋದರು" ಎಂದು

ವ. 4ರಲ್ಲಿ ಪೌಲನು ಹೇಳಿದ್ದಾನೆ. ಹಳೇ ಒಡಂಬಡಿಕೆಯು ಮೂಲದಲ್ಲಿ ನಿಯಮ ಹಾಗೂ ಕಾರ್ಯಗಳ ವಿಧಾನವಾಗಿದೆ, ಹೊಸ ಒಡಂಬಡಿಕೆಯು ಮೂಲದಲ್ಲಿ ಕೃಪೆ ಹಾಗೂ ನಂಬಿಕೆಯ ವ್ಯವಸ್ಥಾಪನೆಯಾಗಿದೆ. ಗಲಾತ್ಯದಲ್ಲಿಯ ಕ್ರೈಸ್ತರು ಹಳೇ ಒಡಂಬಡಿಕೆಯ ಸುನ್ನತಿ ಸಂಸ್ಕಾರಕ್ಕೆ ಒಪ್ಪಿಸಿಕೊಟ್ಟರೆ ಅದು ಅವರನ್ನು ಕ್ರಿಸ್ತನಿಂದ ಬೇರೆ ಮಾಡುವುದು ಎಂದು ಅವರಿಗೆ ಪೌಲನು ಹೇಳಿದನು. ಯಾಕಂದರೆ ಯಾರೂ ಒಂದೇ ಸಮಯದಲ್ಲಿ ಎರಡು ಭಿನ್ನವಾದ ಧಾರ್ಮಿಕ ಪದ್ಧತಿಗಳ ಕೆಳಗೆ ಇರಲಾರರು. ಅವರು ಧರ್ಮಶಾಸ್ತ್ರದ ಅಧೀನತೆಯಲ್ಲಿರುವರು ಇಲ್ಲವೇ ಕೃಪೆಯ ವ್ಯವಸ್ಥಪಾನೆಯಲ್ಲಿರುವರು. ಆದರೆ ಅವರು ಎರಡರ ಅಧೀನತೆಯಲ್ಲಿ ಇರಲಾರರು.

ಇದನ್ನು ಇನ್ನೊಂದು ರೀತಿಯಲ್ಲಿ ಹೇಳುತ್ತೇನೆ: ಅವರು ಧರ್ಮಶಾಸ್ತ್ರದ ವ್ಯವಸ್ಥಾಪನೆಯನ್ನು ಆಯ್ದುಕೊಂಡರೆ (ಸುನ್ನತಿ ಎಂಬ ಹಳೇ ಒಡಂಬಡಿಕೆಯ ಕಾರ್ಯವನ್ನು ಸ್ವೀಕರಿಸಿದರೆ) ಅವರು ರಕ್ಷಿಸಲ್ಪಡಲಾರರು. ಧರ್ಮಶಾಸ್ತ್ರದ ವ್ಯವಸ್ಥಾಪನೆಯಿಂದ ಯಾರೂ ರಕ್ಷಿಸಲ್ಪಡಲಾರರು ಯಾಕಂದರೇ ಧರ್ಮಶಾಸ್ತ್ರವನ್ನು ಪರಿಪೂರ್ಣವಾಗಿ ಕೈಕೊಳ್ಳಲಾರರು (ರೋಮಾಪುರ 3:23; 7:15, 18, 19). ನಾವು ರಕ್ಷಿಸಲ್ಪಡಬೇಕಾದರೆ, ಅದು ದೇವರ ಕೃಪೆ ಮತ್ತು ಕರುಣೆಯ ಮುಖಾಂತರವಾಗಿ (ಎಫೆಸ 2:8, 9; 1 ಪೇತ್ರ 2:10). ಗಲಾತ್ಯದವರು ಹಳೇ ನಿಯಮಕ್ಕೆ ಹಿಂದಿರುಗಿ ಹೋಗುವದನ್ನು ಆಯ್ದುಕೊಂಡರೆ, ಅವರು "ಕೃಪೆಯಿಂದ" ಬಿದ್ದು ಹೋಗುವರು. ಅವರು ಕ್ರಿಸ್ತನಿಂದ "ಅಗಲಿ ಹೋಗುವರು." ಎಂಥಾ ದುಃಖಕರ ಸಂಗತಿಯಲ್ಲವೇ!


ನಾವು ಇಂದು ಹಳೇ ಒಡಂಬಡಿಕೆಯ ಅಧೀನತೆಯಲ್ಲಿ ಅಲ್ಲ, ಆದರೆ ಹೊಸ ಒಡಂಬಡಿಕೆಯ ಕೆಳಗೆ ಇರುವೆವೆಂದು ತಿಳಿದು ಕೊಳ್ಳುವುದು ಮಹತ್ವದ್ದಾಗಿದೆ. ಹಾಗೆಯೇ ತಪ್ಪು ತಿಳುವಳಿಕೆಯಿರುವದಿಲ್ಲ. ಇದರ ಅರ್ಥ ನಾವು ಇನ್ನು ಮುಂದೆ ದಶಾಜ್ಞೆಗಳ ಅಧೀನತೆಯಲ್ಲಿ ಇರುವದಿಲ್ಲವೆಂದು ನಾನು ಒತ್ತಿ ಹೇಳುತ್ತೇನೆ.[14] ದಶಾಜ್ಞಾಗಳು (ವಿಮೋಚನಕಾಂಡ 20; ಧರ್ಮೋಪದೇಶಕಾಂಡ 5) ಹಳೇ ಒಡಂಬಡಿಕೆಯ ಕೇಂದ್ರ ಮತ್ತು ತಿರುಳು ಆಗಿದ್ದು ಶಿಲುಬೆಗೆ ಜಡಿಯಲ್ಪಟ್ಟವು.




"ನಾವು ದಶಾಜ್ಞೆಗಳ ಅಧೀನತೆಯಲ್ಲಿ ಇರದಿದ್ದರೆ, ನಾವು ಕೊಲ್ಲಬಹುದು, ಕದಿಯಬಹುದು ಹಾಗೂ ಆ ಆಜ್ಞೆಗಳಿಂದ ನಿಷೇಧಿಸಲ್ಪಟ್ಟ ಇತರ ಸಂಗತಿಗಳನ್ನು ಮಾಡಬಹುದು ಎಂದರ್ಥವಾಗುವುದು" ಎಂದು ಒಬ್ಬನು ಆಕ್ಷೇಪಿಸಬಹುದು. ಇಲ್ಲ. ಇಂದು ಜನರು ಕೊಲ್ಲಬಾರದು ಇಲ್ಲವೆ ಕದಿಯಬಾರದು ಯಾಕಂದರೆ ಅದು ಹೊಸ ಒಡಂಬಡಿಕೆಯಲ್ಲಿ ಪ್ರತಿಬಂಧಿಸಲ್ಪಟ್ಟಿದೆ (ರೋಮಾಪುರ 13:9; ಎಪೆಸ 4:28). ಹತ್ತು ಆಜ್ಞೆಗಳಲ್ಲಿ ಒಂಭತ್ತು ಆಜ್ಞೆಗಳು ಹೊಸ ಒಡಂಬಡಿಕೆಯಲ್ಲಿ ಪುನರಾವರ್ತಿಸಲ್ಪಟ್ಟಿವೆ.[15]

ದಶಾಜ್ಞೆಗಳಲ್ಲಿ ಕೇವಲ ಒಂದು ಆಜ್ಞೆಯು ಮಾತ್ರ ಹೊಸ ಒಡಂಬಡಿಕೆಯಲ್ಲಿ ಪುನಃ ಹೇಳಲ್ಪಟ್ಟಿಲ್ಲ. ಅದು ನಾಲ್ಕನೆಯ ಆಜ್ಞೆ: "ಸಬ್ಬತ್ ದಿನವನ್ನು ದೇವರ ದಿನವೆಂದು ಆಚರಣೆಗೆ ತರುವದಕ್ಕೆ ಜ್ಞಾಪಕದಲ್ಲಿಟ್ಟು ಕೊಳ್ಳಬೇಕು" (ವಿಮೋಚನಕಾಂಡ 20:8). ಇಂದು ನಮ್ಮ ಆರಾಧನೆಯ "ವಿಶೇಷ" ದಿನವು ವಾರದ ಮೊದಲನೆಯ ದಿನವಾಗಿದೆ: ಆದರೆ ಏಳನೆಯ ದಿನವಾಗಿರುವದಿಲ್ಲ.[16]

ನಾವು ಹಳೇ ಒಡಂಬಡಿಕೆಯ ಅಧೀನತೆಯಲ್ಲಿ ಅಲ್ಲ ಆದರೆ ಹೊಸ ಒಡಂಬಡಿಕೆಯ ಅಧೀನತೆಯಲ್ಲಿ ಇರುವೆವು ಎಂಬ ತತ್ವವು ಉದ್ಭವಿಸುವ ಅನೇಕ ಧಾರ್ಮಿಕ ಪ್ರಶ್ನೆಗಳಿಗೆ ಉತ್ತರವನ್ನು ಕೊಡುವುದು. "ದೇವಾಲಯ ಎಂದು ಕರೆಯಲ್ಪಡುವ ಆರಾಧನೆಯ ಪವಿತ್ರ ಸ್ಥಳದ ಬಗ್ಗೆ ಬೈಬಲ್ ಮಾತಾಡುತ್ತದೆ. ಆರಾಧಿಸಲು ನಮಗೆ ಪವಿತ್ರ ಕಟ್ಟಡವು ಯಾಕೆ ಇರಬಾರದು?" ಎಂದು ಯಾರಾದರೂ ಹೇಳಬಹುದು. "ಯಾಕಂದರೆ ಅದು ಹಳೇ ಒಡಂಬಡಿಕೆಯಲ್ಲಿತ್ತು, ಆದರೆ ಹೊಸ ಒಡಂಬಡಿಕೆಯಲ್ಲಿ ಅಲ್ಲ" ಎಂದು ಉತ್ತರವಿದೆ. "ವಿಶೇಷ ನಿಲುವಂಗಿಗಳೊಂದಿಗೆ ಪ್ರತ್ಯೇಕವಾದ ಯಾಜಕತ್ವದ ಬಗ್ಗೆ ಬೈಬಲ್ ಮಾತಾಡುತ್ತದೆ. ಇವು ನಮಗೆ ಯಾಕೆ ಇರಬಾರದು?" ಎಂದು ಮತ್ತೊಬ್ಬನು ಹೇಳಬಹುದು. "ಯಾಕಂದರೆ ಅದು ಹಳೇ ಒಡಂಬಡಿಕೆಯಲ್ಲಿತ್ತು, ಆದರೆ ಹೊಸ ಒಡಂಬಡಿಕೆಯಲ್ಲಿ ಅಲ್ಲ" ಎಂದು ಉತ್ತರವಿದೆ. "ಆರಾಧಾನೆಯ ಕಾರ್ಯಗಳಿಗಾಗಿ ಧೂಪ ಸುಡುವುದು, ವಾದ್ಯಗಳಿಂದ ಸಂಗೀತವೂ ಇದ್ದುದ್ದನ್ನು ಕುರಿತು ಬೈಬಲಿನಲ್ಲಿ ನಾನು ಓದುತ್ತೇನೆ. ಅಂಥ ಆಚಾರಗಳನ್ನು ನಾವೇಕೆ ರೂಡಿಸಬಾರದು?" ಎಂದು ಇನೊಬ್ಬನು ಕೇಳುವನು. "ಯಾಕಂದರೆ ಅದು ಹಳೇ ಒಡಂಬಡಿಕೆಯಲ್ಲಿದೆ, ಆದರೆ ಹೊಸ ಒಡಂಬಡಿಕೆಯಲ್ಲಿ ಇಲ್ಲ" ಎಂದು ಉತ್ತರವಿದೆ.




ನಾವು ನಮ್ಮ ಅಧ್ಯಯನವನ್ನು ಮುಂದುವರಿಸುವಂತೆ, ದೇವರನ್ನು ಹೇಗೆ ಮೆಚ್ಚಿಸಬೇಕು ಮತ್ತು ನಾವು ಸಾಯುವಾಗ ಪರಲೋಕಕ್ಕೆ ಹೋಗುವುದು ಹೇಗೆ ಎಂಬುದನ್ನು ಕಂಡು ಕೊಳ್ಳಲು ನಾವು ಹೊಸ ಒಡಂಬಡಿಕೆಗೆ ಹೋಗುತ್ತೇವೆ.

## ಹಳೇ ಒಡಂಬಡಿಕೆಯ ಮೌಲ್ಯ

ಇದನ್ನು ಹೇಳಿದ ಮೇಲೆ, ಕ್ರಿಸ್ತನಿಗೆ ಹಳೇ ಒಡಂಬಡಿಕೆಯಲ್ಲಿ ಯಾವುದೇ ಬೆಲೆಯಿಲ್ಲ ಎಂದರ್ಥವಾಗುವದಿಲ್ಲವೆಂದು ಒತ್ತಿಹೇಳಲು ಅವಸರಪಡುತ್ತೇನೆ. 1 ಕೊರಿಂಥ 10ರಲ್ಲಿ ಪೌಲನು ತನ್ನ ವಾಚಕರಿಗೆ ಹಳೇ ಒಡಂಬಡಿಕೆಯ ಒಂದು ಘಟನೆಯನ್ನು ಜ್ಞಾಪಕಕ್ಕೆ ತಂದು ಹೀಗೆ ಹೇಳದನು: "ಅವರಿಗೆ ಸಂಭವಿಸಿದ ಈ ಸಂಗತಿಗಳು ನಿದರ್ಶನ ರೂಪವಾಗಿವೆ; ಮತ್ತು ಯುಗಾಂತ್ಯಕ್ಕೆ ಬಂದಿರುವವರಾದ

ನಮಗೆ ಬುದ್ಧಿವಾದಗಳಾಗಿ ಬರೆದಿವೆ'' (ವ. 11). ಹಳೇ ಒಡಂಬಡಿಕೆಯು ನಾವು ಕಲಿತು ಕೊಳ್ಳಬಹುದಾದ ಉದಾಹರಣೆಗಳಿಂದ ತುಂಬಿ ಕೊಂಡಿದೆ. ಉದಾ ಹರಣೆಯಾಗಿ, ಹೊಸ ಒಡಂಬಡಿಕೆಯಲ್ಲಿ ನಾವು "ನಂಬಿಕೆಯಿಂದ ಜೀವಿಸ ಬೇಕೆಂದು" (ರೋಮಾಪುರ 1:17; ಗಲಾತ್ಯ 2:20) ನಮಗೆ ಹೇಳಲ್ಪಟ್ಟಿದೆ. ಆದರೆ ಅದರ ಅರ್ಥ ವೇನು? ಅಬ್ರಹಾಮನಂಥ ವಿಶ್ವಾಸದ ಉದಾಹರಣೆಗಳಿಗೆ ಹಳೇ ಒಡಂಬಡಿಕೆಯ ಕಡೆಗೆ ನೋಡುವುದು ಕಂಡುಕೊಳ್ಳುವ ಒಂದು ಮಾರ್ಗವಾಗಿದೆ (ಇಬ್ರಿಯ 11:9, 17 ನೋಡಿರಿ).

"ನಾವು ತಾಳ್ಮೆಯಿಂದಲೂ ಲೇಖನಗಳ ಆದರಣೆಯಿಂದಲೂ ನಿರೀಕ್ಷೆ ಹೊಂದುವಂತೆ ಪೂರ್ವ ಕಾಲದಲ್ಲಿ ಬರೆಯಲ್ಪಟ್ಟವುಗಳೆಲ್ಲಾ ನಮಗೆ ಉಪದೇಶಿ ಸುವದಕ್ಕಾಗಿಯೇ ಬರೆಯಲ್ಪಟ್ಟವು'' (ರೋಮಾಪುರ 15:4) ಎಂದು ರೋಮ್ ದಲ್ಲಿಯ ಕ್ರೈಸ್ತರಿಗೆ ಪೌಲನು ಹೇಳಿದನು. ಚರಿತ್ರೆಯ ಒಂದು ನೂರು ವರ್ಷಗಳಗಿಂತ ಕಡಿಮೆ ಅವಧಿಯನ್ನು ಮತ್ತು ಕ್ರೈಸ್ತತ್ವದ ಸುಮಾರು ಅರವತ್ತು ವರ್ಷಗಳನ್ನು ಮಾತ್ರವೇ ಹೊಸ ಒಡಂಬಡಿಕೆಯು ಒಳ ಗೊಂಡಿರುತ್ತದೆ. ತಕ್ಷಣದ ಬಹುಮಾನದ ಕೆಲವೇ ಉದಾಹರಣೆಗಳು ಅವರಲ್ಲಿವೆ (ನಕರಾತ್ಮಮಕ ಉದಾಹರಣೆಗಾಗಿ ಅಪೊಸ್ತಲರ ಕೃತ್ಯ 5:1-11 ನೋಡಿರಿ). ಆದೆರೆ ಅದು ಮುಖ್ಯವಾಗಿ, ಹೇಗೆ ಜೀವಿಸಬೇಕು ಎಂದು ನಮಗೆ ಹೇಳತ್ತದೆ ಮತ್ತು ದೇವರಿಗೆ ವಿಧೇಯ ರಾದರೆ ದೊರೆಯುವ ಆಶೀರ್ವಾದವನ್ನು ವಾಗ್ದಾನ ಮಾಡುತ್ತದೆ. ದೇವರು ನಿಜವಾ ಗಿಯೂ ತನ್ನ ವಾಗ್ದಾಗಳನ್ನು ನೆರವೇರಿಸುವನೋ ಎಂದು ನಾವು ಆಶ್ಚರ್ಯಪಡಬಹುದು. ಆತನು ಮಾಡುವನೆಂದು ಹಳೇ ಒಡಂಬಡಿಕೆಯು ನಿಮಗೆ ಭರವಸೆ ಕೊಡುತ್ತದೆ. ಹಳೇ ಒಡಂಬಡಿಕೆಯು ಚರಿತ್ರಯ ಹಲವು ಸಾವಿರ ವರ್ಷಗಳನ್ನು ಒಳಗೊಂಡಿರುವುದರಿಂದ, ವಿಧೇಯತೆಯ ಮತ್ತು ಅವಿಧೇಯತೆಯ ದೀರ್ಘವಾದ ಪರಿಣಾಮವನ್ನು ನಾವು ಸ್ಪಷ್ಟವಾಗಿ ನೋಡ ಬಹುದು. ಜನರು ದೇವರಿಗೆ ವಿಧೇಯರಾದಾಗ, ಅವರು ಅಶೀರ್ವಾದಿಸಲ್ಪಟ್ಟರು; ಅವರು ಅವಿಧೇಯರಾದಾಗ ಅವರು ಪರಿಣಾಮಗಳ ಶ್ರಮೆಯನ್ನು ಅನುಭವಿಸಿದರು. ಹೀಗೆ ಹಳೇ ಒಡಂಬಡಿಕೆಯ ಪರಿಶುದ್ಧ ಬರಹದ ಮುಖಾಂತರವಾಗಿ "ದೇವರು ನಂಬಿಗಸ್ಥನು'' (1 ಕೊರಿಂಥ 1:9) ಎಂಬ ಭರವಸೆ ನಮಗೆ ಕೊಡಲ್ಪಟ್ಟಿದೆ.

ಹಳೇ ಒಡಂಬಡಿಕೆಯನ್ನು ಅಧ್ಯಯನ ಮಾಡುವದರಿಂದ ಇತರ ಅನೇಕ ಲಾಭಗಳು ಬರುವವು. ಜಗತ್ತಿನ ಮೂಲವನು ಕುರಿತು, ಮನುಷ್ಯನ ಮೂಲವನ್ನು ಕುರಿತು ನೀವು ತಿಳಿಯಲು ಬಯಸಿದರೆ, ನಿಮ್ಮ ಮುಖ್ಯ ಮೂಲವು ಹಳೇ ಒಡಂಬಡಿಕೆಯೆ (ಆದಿಕಾಂಡ 1; 2). ಹೊಸ ಒಡಂಬಡಿಕೆಯ ಹೆಚ್ಚಾದ ಭಾಗವು (ಉದಾಹರಣೆಯಾಗಿ ಇಬ್ರಿಯರಿಗೆ ಬರೆದ ಪತ್ರಿಕೆ) ಹಳೇ ಒಡಂಬಡಿಕೆಯ ಕೆಲವು ಜ್ಞಾನವನ್ನು ಹಿನ್ನೆಲೆಯಾಗಿ ತೆಗದು ಕೊಳ್ಳುತ್ತದೆ. ಹಳೇ ಒಡಂಬಡಿಕೆಯ ಅಧ್ಯಯನವು ಹೊಸ ಒಡಂಬಡಿಕೆಯನ್ನು ಅರ್ಥ ಮಾಡಿಕೊಳ್ಳಲು ನಮಗೆ ಸಹಾಯ ಮಾಡುವುದು. ಆದುದರಿಂದ, ನಿಮ್ಮ ಓದುವಿಕೆಯ ಮತ್ತು ಅಧ್ಯಯನಗಳ ಕಾರ್ಯಕ್ರಮದಲ್ಲಿ ಹಳೇ ಒಡಂಬಡಿಕೆಯನ್ನು ಕೂಡಿಸಿಕೊಳ್ಳಿರಿ ಎಂದು ಪ್ರೋತ್ಸಹಿಸುವೆನು. ಇಂದು ನಾವು ಯೇಸು ಕ್ರಿಸ್ತನ ಹೊಸ ಒಡಂಬಡಿಕೆಯ ಅಧೀನತೆಯಲ್ಲಿ ಇರುವೆವೆಂಬುದನ್ನು ನಿಮ್ಮ ಮನಸ್ಸಿನಲ್ಲಿಟ್ಟುಕೊಳ್ಳಿರಿ. ನಿತ್ಯಜೀವದ ನಮ್ಮ ಗುರಿಯನ್ನು ತಲುಪಲು ನಮಗೆ ಅವಶ್ಯವಾಗಿರುವ ಸ್ಪಷ್ಟವಾದ ಉಪದೇಶಗಳನ್ನು ನಾವು ಕಂಡು ಕೊಳ್ಳುವುದು ಹೊಸ ಒಡಂಬಡಿಕೆಯಲ್ಲಿಯೇ.

## ಮುಕ್ತಾಯ

ಬೈಬಲು ನಮ್ಮ ಧಾರ್ಮಿಕ ಅಧಿಕೃತೆಯಾಗಿದೆ. ಪ್ರತ್ಯೇಕವಾಗಿ ಹೊಸ ಒಡಂಬಡಿಕೆಯು ಇಂದು ನಮ್ಮನ್ನು ಬಂಧಿಸುವ ಒಡಂಬಡಿಕೆಯಾಗಿದೆ. ಈ ಕಾರಣದಿಂದ, ಮಾಹಿತಿಗಾಗಿಯೂ ಉಪದೇಶಕ್ಕಾಗಿಯೂ ಪ್ರಾಥಮಿಕ ಮೂಲವು ಹೊಸ ಒಡಂಬಡಿಕೆಯಾಗಿದೆ. ನೀವು ಒಪ್ಪಿ ಕೊಳ್ಳುವಿರೋ? ಹಾಗಿದ್ದರೆ, ನೀವು ಮುಂದಿನ ಪಾಠಕ್ಕೆ ಸಿದ್ಧರಾಗಿರುವಿರಿ.

---

ಟಿಪ್ಪಣಿಗಳು

[1]"Scribble" (ಗೀಚಿ ಬರೆ, ಅವಸರವಾಗಿ ಬರೆ) ಎಂಬ ಪದದೊಂದಿಗೆ ನೀವು ಪರಿಚಿತಯುಳ್ಳವರಾಗಿರಬಹುದು. ಅದು "Scripture" ಪರಿಶುದ್ಧ ಗ್ರಂಥದ ಲೇಖನೆಗಳು, ಪವಿತ್ರ ಗ್ರಂಥ ಎಂಬುದಕ್ಕೆ ಸಂಬಂಧಿಸಿದೆ. [2]"ಪವಿತ್ರ" ಇಲ್ಲವೇ "ಪರಿಶುದ್ಧ" ಎಂದು ಭಾಷಾಂತರಿಸಲ್ಪಟ್ಟ ಗ್ರೀಕ ಪದದ ಅರ್ಥ "ವಿಶೇಷವಾದ ಉದ್ದೇಶಕ್ಕಾಗಿ ಪ್ರತ್ಯೇಕಿಸಿಡು" ಎಂದಾಗುವುದು. ನಾನು ಮಕ್ಕಳಿಗೆ ಬೋಧಿಸುವಾಗ "ಪವಿತ್ರ" ಅಂದರೆ "ವಿಶೇಷವಾದದ್ದು" ಎಂದು ಹೇಳುತ್ತೇನೆ. [3]ಯಾರದರೂ ಸಾಯುವಾಗ "ಅವನು ಕೊನೆ ಉಸಿರು ಎಳೆದನು" ಇಲ್ಲವೇ "ತೀರಿ ಕೊಂಡನು" ಎಂದು ಹೇಳುತ್ತೇವೆ. "ತೀರಿಕೊಂಡನು" ಅಂದರೆ "ಉಸಿರು ಹೊರಬಿಟ್ಟನು" ಎಂದರ್ಥ. [4]ಕಾರಣಗಳಲ್ಲಿ ಇದು ಒಂದು: ಹಳೇ ಒಡಂಬಡಿಕೆಯು ಚರಿತ್ರೆಯ ಹಲವಾರು ಸಾವಿರ ವರುಷಗಳನ್ನು ಒಳಗೊಂಡಿರುವುದು. ಆದರೆ ಹೊಸ ಒಡಂಬಡಿಕೆಯು ಒಂದು ನೂರಕ್ಕಿಂತಲೂ ಕಡಿಮೆ ವರ್ಷಗಳನ್ನು ಒಳಗೊಂಡಿರುವುದು. [5]ಹೊಸ ಒಡಂಬಡಕೆಯ ನಿಶ್ಚಿತವಾದ ನಿಯಮಗಳು ಇರುವದಿಲ್ಲ ಎಂದರ್ಥವಲ್ಲ. ನಿಶ್ಚಿತವಾದ ನಿಯಮಗಳು - ಸಕಾರಾತ್ಮಕವಾದವುಗಳು ಮತ್ತು ನಕಾರಾತ್ಮಕವಾದವುಗಳು - ಎರಡೂ ಹೊಸ ಒಡಂಬಡಕೆಯಲ್ಲಿ ಕೊಡಲ್ಪಟ್ಟಿವೆ. ಆದರೆ ನಮ್ಮ ಸ್ವಂತ ಜೀವನಗಳಿಗೆ ಅನ್ವಯಿಸಲಿಕ್ಕೆ ದೇವರು ನಮ್ಮಿಂದ ನಿರೀಕ್ಷಿಸುವ ತತ್ವಗಳ ಮಲೆ ಪ್ರಾಧಾನ್ಯತೆ ಕೊಡಲ್ಪಟ್ಟಿದೆ. ನಾವು ನಮ್ಮ ಮಕ್ಕಳ ಬಗ್ಗೆ ಹೇಗೆ ನಡೆದು ಕೊಳ್ಳುತ್ತೇವೆ ಎಂಬುದ್ನು ನಾನು ಉದಾಹರಣೆಯಾಗಿ ಉಪಯೋಗಿಸುತ್ತಿದ್ದೇನೆ, ಅವರು ಚಿಕ್ಕವರಾಗಿರುವಾಗ ಅವರು ಯಾವ ರೀತಿ ಯಲ್ಲಿ ನಡೆದು ಕೊಳ್ಳಬೇಕು ಎಂಬುದರ ಬಗ್ಗೆ ಬಹಳ ನಿಶ್ಚಿತವಾದ ಉಪದೇಶಗಳನ್ನು ಕೊಡು ತ್ತೇವೆ. ಅವರು ದೊಡ್ಡವರಾಗುವಂತೆ "ಒಳ್ಳೆಯವರಾಗಿರಬೇಕು" ಎಂದು ಹೇಳುತ್ತೇವೆ. ಮತ್ತು ಅವರು ಮಾಡಲು ಪ್ರತಿಯೊಂದು ಆ ಸಾಮಾನ್ಯ ತತ್ವವನ್ನು ಅವರು ಅನ್ವಯಿಸುವರೆಂದು ನಂಬುತ್ತೇವೆ. [6]ನಾವು ಇದನ್ನು ಪಾಠ 9ರಲ್ಲಿ ಚರ್ಚಿಸುತ್ತೇವೆ. [7]ಯೆಹೂದ್ಯರು ಯಾಕೋಬನ ವಂಶ ಜನರಾಗಿದ್ದರು (ಹಾಗೂ ಆಗಿರುವರು). ಅವನು ಅಬ್ರಹಾಮ ಮತ್ತು ಸಾರಳ ಮೊಮ್ಮಗನು. ಯಾಕೋಬನ ಹೆಸರು ಇಸ್ರಾಯೇಲ ಎಂದು ಬದಲಾಯಿಸಲ್ಪಟ್ಟಿದ್ದರಿಂದ, ಈ ಜನರನ್ನು ಬೈಬಲು ಇಸ್ರಾಯೇಲ್ಯರು ಎಂದು ಹೇಳುತ್ತದೆ. ಅವರು ಹೀಬ್ರೂ ಭಾಷೆಯನ್ನು ಮಾತಾಡಿದ್ದರಿಂದ ಕೆಲವು ಸಲ ಅವರು ಬೈಬಲಿನಲ್ಲಿ ಇಬ್ರೀಯರು ಎಂದು ಕರೆಯಲ್ಪಟ್ಟಿದ್ದಾರೆ. [8]ಯೆರೆಮೀಯ 31:33, 34 ಮತ್ತು ಇಬ್ರೀಯ 8:6-13 ನೋಡಿರಿ. [9]ಭಿನ್ನವಾದ ಸಮಾಜಗಳಿಗೆ ಕಾನೂನು ಬದ್ಧ ಒಪ್ಪಂದ ಗಳನ್ನು ಪ್ರಕಟಿಸಲು ಭಿನ್ನವಾದ ಮಾರ್ಗಗಳಿವೆ. ಕೆಲವುಗಳಲ್ಲಿ ಒಪ್ಪಂದಗಳು ಬಹಿರಂಗದಲ್ಲಿ ಓದಲ್ಪಡುತ್ತವೆ. ಬೇರೆಯವುಗಳಲ್ಲಿ, ಒಪ್ಪಂದಗಳು ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟಿಸಲ್ಪಡುತ್ತವೆ. ಒಡಂಬಡಿಕೆಯು ಪೂರೈಸಲ್ಪಟ್ಟಿದೆ ಹಾಗೂ ಅದು ಇನ್ನು ಮುಂದೆ ಜಾರಿಯಲ್ಲಿರುವದಿಲ್ಲ ಎಂದು ಎಲ್ಲರಿಗೂ ತಿಳಿಸುವದಕ್ಕಾಗಿ ಬಹಿರಂಗ ಸ್ಥಳದಲ್ಲಿ ಹಚ್ಚುವುದು ಬೈಬಲ್ ಸಮಯದಲ್ಲಿ ರೂಢಿಯಲ್ಲಿತ್ತು. ಸಾಲದ (ಪಾಪದ) ಬಗ್ಗೆ ಪೌಲನು ಮಾತನಾಡಿದಾಗ ಹಾಗೂ (ಮನುಷ್ಯರಿಗೆ ಪಾಪದ ಅರುಹು ಹುಟ್ಟಿಸಿದ) ಆಜ್ಞೆಗಳು "ಶಿಲುಬೆಗೆ ಜಡಿಯಲ್ಪಡುವುದು" ಎಂದು ಹೇಳಿದಾಗ ಪೌಲನು ಈ ಉಪಮೆಯನ್ನು ಉಪಯೋಗಿಸುವಂತೆ ತೋರುತ್ತದೆ. [10]ಇಬ್ರಿಯ 9:15ರ ಉಳಿದ ಭಾಗವು ಯೇಸುವಿನ ರಕ್ತವು ಹೊಸ ಒಡಂಬಡಿಕೆಯ ಅಧೀನತೆಯಲ್ಲಿರುವವರನ್ನು ಮಾತ್ರವಲ್ಲದೇ, ಹಳೇ ಒಡಂಬಡಿಕೆಯ ಅಧೀನತೆಯಲ್ಲಿರುವವರನ್ನು ಸಹ ರಕ್ಷಿಸುತ್ತದೆ ಎಂಬುದನ್ನು ವಿವರಿಸುತ್ತದೆ.

[11]ಉದಾಹರಣೆಯನ್ನು ವಿಸ್ತರಿಸಬಹುದು. ಉದಾಹರಣಾರ್ಥವಾಗಿ, ಒಬ್ಬ ಮನುಷ್ಯನ ಮರಣದನಂತರ ಸಾಮಾನ್ಯವಾಗಿ ಮೃತ ಪತ್ರವು ಓದಲ್ಪಟ್ಟು, ಜಾರಿಗೊಳಿಸಲ್ಪಡುವ ಮೊದಲು

“ಪರೀಕ್ಷೆಯ ಅವಧಿ” ಇರುವುದು. ಯೇಸುವಿನ ಮರಣದ ನಂತರ ಐವತ್ತು ದಿನಗಳು ದಾಟಿ ಹೋದವು. ಹಾಗೂ ಮೊದಲನೆಯ ಸಲ ಆತನ ಮೃತ ಪತ್ರದ ಸಂಗತಿಗಳು ಪ್ರಕಟಿಸಲ್ಪಟ್ಟವು. ಯೇಸುವು ಯೆಹೂದಿ ಪಸ್ಕ ಹಬ್ಬದ ಸಮಯದಲ್ಲಿ ಮರಣಹೊಂದಿದನು (ಯೋಹಾನ 13:1) ಮತ್ತು ಯೆಹೂದಿ ಪಂಚಾಶತ್ತಮ ಹಬ್ಬವು ಪಸ್ಕ ಹಬ್ಬವಾದ ಐವತ್ತನೆಯ ದಿನ ಬಂದಿತು. ಪಂಚಾಶತ್ತಮ ಹಬ್ಬದ ದಿನದಂದು ಸುವಾರ್ತೆಯು ಪ್ರಸಂಗಿಸಲ್ಪಟ್ಟಿತು (ಅಪೊಸ್ತಲರ ಕೃತ್ಯ 2:1, 14-40). [12]“ಅನ್ಯರು” ಎಂಬುದು ಯೆಹೂದ್ಯರಲ್ಲದವರಿಗೆ ಸಂಬಂಧಿಸಿದೆ. ಈ ವಿವರಣೆಯಿಂದ, ನಾನು ಅನ್ಯನು ಮತ್ತು ಬಹುಶಃ ನೀವೂ ಸಹ ಅನ್ಯರು. [13]ಯೆಹೂದಿ ಬಾಲಕರಿಗೆ ಅವರು ಎಂಟು ದಿನ ದೊಡ್ಡವರಾದಾಗ ಧಾರ್ಮಿಕ ಆಚರಣೆಯಾಗಿ ಸುನ್ನತಿ ಮಾಡಿಸಲ್ಪಡುತಿತ್ತು (ಯಾಜಕಕಾಂಡ 12:3). [14]2 ಕೊರಿಂಥ 3:3, 7, 8; ರೋಮಾಪುರ 7:4, 7 ನೋಡಿರಿ. [15]ಕೆಲವು ಹಳೇ ಒಡಂಬಡಿಕೆಯಲ್ಲಿ ಇದ್ದಂತೆಯೇ ಹೊಸ ಒಡಂಬಡಿಕೆಯಲ್ಲಿ ಅಕ್ಷರ ಅಕ್ಷರವಾಗಿ ಪುನಃ ಪುನಃ ಹೇಳಲ್ಪಟ್ಟಿವೆ. ಬೇರೆಯವುಗಳು ತತ್ವದಲ್ಲಿ ಕಂಡುಬರುತ್ತವೆ. ದಶಾಜ್ಞೆಗಳಲ್ಲಿ ಹೆಚ್ಚಾದವುಗಳು ಯಾವುದೇ ಯುಗದಲ್ಲಿ ಅವಶ್ಯವಾಗಿರುವ ಮೂಲ ಮೌಲ್ಯಗಳನ್ನು ಒಳಗೊಂಡಿವೆ, ಹೀಗೆ ದೇವರು ತನ್ನ ಜನರೊಂದಿಗೆ ಮಾಡಿಕೊಂಡ ಹೊಸ ಒಡಂಬಡಿಕೆಯಲ್ಲಿ ಒಂಭತ್ತು ಕೂಡಿಸಲ್ಪಟ್ಟಿವೆ. [16]ನಾವು ಇದನ್ನು ಪಾಠ 9ರಲ್ಲಿ ಚರ್ಚಿಸುತ್ತೇವೆ.

© 2009 Truth for Today